ಕುಟುಂಬವೆಂಬ ಚಿಪ್ಪಿನ ಒಳಗಡೆಯೇ ಹೆಣ್ಣುಮಕ್ಕಳ ಮೇಲೆ ನಡೆಯುವ ಲೈಂಗಿಕ ದೌರ್ಜನ್ಯಗಳು ಹೇಗೆ ಅವರ ಬದುಕನ್ನು ಹಿಸುಕಿಹಾಕಿ, ಭಯಾನಕ ನೆನಪಾಗಿ ಕಾಡುತ್ತವೆ ಎಂಬುದನ್ನು ತೋರಿಸುವ ಕಥೆ 'ಬೆಳ್ಳಿಚುಕ್ಕಿ'. ಮಂಜಿಗೆ ತಂದೆಯಿಂದ ಆದ ಲೈಂಗಿಕ ಶೋಷಣೆ ಬೆಂಬಿಡದೇ ಕಾಡುತ್ತಿದೆ. ತಂದೆ ಸತ್ತು ಎರಡನೇ ದಿನ ನಡುರಾತ್ರಿ ಅಂಗಡಿಯಲ್ಲಿ ಅಪ್ಪನೇ ಕೂತಿರುವುದು ಕಾಣಿಸುತ್ತದೆ.

ತುಸು ಎಚ್ಚರ ತಪ್ಪಿದ್ದರೂ ಬರೀ ಹಾರರ್ ಕಥೆಯಾಗಿ ಮುಗಿದುಬಿಡಬಹುದಾಗಿದ್ದ ಈ ಕಥೆ ಫ್ಯಾಂಟಸಿಯನ್ನು ರೋಚಕತೆಗಾಗಿಯಲ್ಲದೇ, ಒಂದು ರೂಪಕವನ್ನು ಕಟ್ಟಲು ಬಳಸಿಕೊಂಡಿರುವುದರಿಂದ ಗಮನ ಸೆಳೆಯುತ್ತದೆ. ಅಂಗಡಿಯಲ್ಲಿ ಕೂತು, 'ಇಟೀಟ ಪೂವ್ವ... ಜಾಲಿ ಹೂವ್ವ...' ಎಂದು ತಣ್ಣನೆಯ ಧ್ವನಿಯಲ್ಲಿ ಹಾಡುತ್ತ ಕೂತಿರುವ ಅಪ್ಪನಿಂದ ತಪ್ಪಿಸಿಕೊಳ್ಳುವುದು ಹೇಗೆ ಎಂಬ ದಿಗ್ಭ್ರಮೆಯಲ್ಲಿ ಮಂಜಿ ಇದ್ದಾಳೆ. ಬದುಕಿದ್ದಾಗ ನರಕ ತೋರಿಸಿದ ಅಪ್ಪ, ಸತ್ತ ಮೇಲೂ ಬಂದು ಕಾಡುತ್ತಿರುವುದು ಅವಳನ್ನು ಕಂಗೆಡಿಸಿದೆ.

ತಮ್ಮ ಸತ್ವಶಾಲಿ ಭಾಷೆಯ ಮೂಲಕ ಈ ಕಥೆಗೊಂದು ದಟ್ಟವಾದ ಆವರಣವನ್ನು ಅಮರೇಶ ಕಟ್ಟಿದ್ದಾರೆ. ಮಂಜಿಗೆ ತಂದೆ ಸತ್ತಮೇಲೂ, ಭೂತವಾಗಿ ಕಾಡುತ್ತಿದ್ದಾನೆ. ಅವಳ ಪಾಲಿಗೆ ತಂದೆ, ತನ್ನ ಬದುಕಿನ ಭೂತಕಾಲದ ಕರಾಳ ನೆನಪಾಗಿಯೂ ಬೆನ್ನು ಬಿಡದೇ ಕಾಡುತ್ತಿದ್ದಾನೆ! ಆ ಭೂತಕಾಲದ ಪಾತಾಳಗರಡಿಯಿಂದ ತಪ್ಪಿಸಿಕೊಳ್ಳಲು ಅವಳು ಹೆಣಗುತ್ತಿದ್ದಾಳೆ. ಆದರೆ, ಭೂತವಾಗಿರುವ ಅವನ ಎದುರಿಸದೇ ಭೂತಕಾಲದಿಂದ ಅವಳು ತಪ್ಪಿಸಿಕೊಳ್ಳಲೂ ಆಗದು. ಈ ಎರಡು ಆಯಾಮಗಳನ್ನು ಕಥೆಗಾರ ಕಲಾತ್ಮಕವಾಗಿ ಹೆಣೆದಿರುವ ಪರಿ ಈ ಕಥೆಗೆ ವಿಶೇಷ ಧ್ವನಿಶಕ್ತಿಯನ್ನು ನೀಡಿದೆ. ಫ್ಯಾಂಟಸಿಯ ಎಳೆಯನ್ನು, ರಂಜನೆಗಾಗಲಿ, ಕಥೆಗಾರನ ಅನುಕೂಲಕ್ಕಾಗಲಿ ಅಷ್ಟೇ ಅಲ್ಲದೆ, ಕಥೆಯ ಧ್ವನಿಶಕ್ತಿಯ ಅವಿಭಾಜ್ಯ ಭಾಗವೇ ಆಗಿ ತಂದಿರುವ ಯಶಸ್ವಿ ಪ್ರಯೋಗ ಇದು.

ಕೊನೆಗೆ ಮಂಜಿ, ಅಪ್ಪನ ದೆವ್ವವನ್ನು ಧೈರ್ಯವಾಗಿ ಎದುರಿಸಿ, 'ನಮ್ಮನೇನು ಪರೀಕ್ಷೆ ಮಾಡತೀಯಲೋ ಬಾಡಕೋವ್' ಎಂದು ಕಟ್ಟಿಗೆ ಹುಡುಕಾಡಿ ತಂದು ಏಟು ಹಾಕಲು ನಿಂತಾಗ ಅಪ್ಪ ಹೊರಟು ಹೋಗುತ್ತಾನೆ. ಈ ಕೊನೆಯೂ ಅಷ್ಟೇ ಧ್ವನಿಪೂರ್ಣವಾಗಿದೆ. ಭಯದಿಂದ ನರಳುವಾಗ ಕಣ್ಣಮುಂದೆ ಮೆರೆದಾಡುವ ಅವಳ ತಂದೆ, ತಿರುಗಿ ನಿಂತಾಗ ಎದುರಿಸಲು ಧೈರ್ಯವಿಲ್ಲದೆ ಪಲಾಯನ ಮಾಡುವುದು ಸಾಕಷ್ಟು ಸಂಗತಿಗಳನ್ನು ಒಟ್ಟೊಟ್ಟಿಗೇ ಹೇಳುವ ಹಾಗಿದೆ. ಮಂಜಿಯಂಥವರ ಗಟ್ಟಿತನದ ಜೊತೆಗೆ ಅವಳ ತಂದೆಯ ಚಿತ್ರಣವೂ ಅಷ್ಟೇ ಸೂಕ್ಷ್ಮವಾಗಿ ಬಂದಿರುವುದು ಈ ಕಥೆಯ ಹೆಚ್ಚುಗಾರಿಕೆ.

'ಬೆಳ್ಳಿಚುಕ್ಕಿ' ಕಥೆಗಿಂತ ತುಂಬಾ ಭಿನ್ನವಾದ ಫ್ಯಾಂಟಸಿ ಕಥೆ 'ಮಣ್ಣಮ್ಮ' ಕಥೆಯಾಗಿ ತುಂಬಾ ಕಾಡುವ ಹಾಗಿರದಿದ್ದರೂ ತನ್ನ ಅನುಭವವನ್ನು ಹಿಡಿಯಲು ಕಥೆಗಾರ ತನ್ನನ್ನು ನಾನು ಹುರಿಗೊಳಿಸಿಕೊಳ್ಳುವ ನಿಟ್ಟಿನಲ್ಲಿ ಅಗತ್ಯವಾಗಿರುವ ಪ್ರಯೋಗವಾಗಿ ಈ ಕಥೆ ಗಮನಸೆಳೆಯುತ್ತದೆ. ಸಾಂಕೇತಿಕತೆಯ ಹಳಿಗಳ ಮೇಲೆಯೇ ಸಾಗುವ ಈ ಕಥೆಯ ವಿವರಗಳು ತುಂಬಾ ಆಸಕ್ತಿಕರವಾಗಿ ಓದಿಸಿಕೊಂಡು ಹೋಗುತ್ತವೆ. ಆದರೆ, ಮನಸ್ಸಿಗೆ ತಾಕುವ ಅನುಭವವನ್ನೇನೂ ದಾಟಿಸುವುದಿಲ್ಲ.

'ಹಾಸಿಗೆ ಪತ್ತೇವು', 'ಕಗ್ಗಂಟು', 'ಎರಡನೆಯ ಸೊಸೆ' ಕಥೆಗಳು, ದಟ್ಟ ವಾತಾವರಣ ಮತ್ತು ಗಟ್ಟಿ ಪಾತ್ರಗಳಿಂದ ಗಮನಸೆಳೆಯುತ್ತವೆ. ಆದರೆ ಇನ್ನೂ ಏನೋ ಆಗಬೇಕಿತ್ತಲ್ಲ ಅನಿಸುವ ಹಾಗೆ ಅಚಾನಕ್ಕಾಗಿ ಮುಗಿದುಹೋಗುತ್ತವೆ.

'ಹಾಸಿಗೆ ಪತ್ತೇವು' ಕಥೆಯಲ್ಲಿನ ಮಾರೆಮ್ಮ, 'ಕಗ್ಗಂಟು' ಕಥೆಯ ಸಾವಿತ್ರಿ, 'ಎರಡನೆಯ ಸೊಸೆ' ಕಥೆಯ ಹಳ್ಳವ್ವ ಎಲ್ಲವ್ವಾ ತುಂಬ ಗಟ್ಟಿಯಾದ ಪಾತ್ರಗಳು. ಬದುಕಲ್ಲಿ ಎದುರಾಗುವ ಕಷ್ಟಗಳನ್ನು ಬಲುದಿಟ್ಟವಾಗಿ ನಿಂತು ಎದುರಿಸುವ ಪಾತ್ರಗಳು. ಈ ಪಾತ್ರಗಳನ್ನು ಬಹುಗಾಢವಾಗಿ ಕಟ್ಟಿಕೊಡುವ ಕಥೆಗಾರರು ಕಥೆಯನ್ನು ತುಸು ಅವಸರವಾಗಿ ಮುಗಿಸಿಬಿಡುವುದರಿಂದ ಸಣ್ಣದೊಂದು ಅತೃಪ್ತಿ ಮನಸಲ್ಲಿ ಉಳಿದುಬಿಡುತ್ತದೆ.

'ಹಾಸಿಗೆ ಪತ್ತೇವು' ಕಥೆಯಲ್ಲಿ ಮಾತೆತ್ತಿದರೆ ಗಂಡನಿಗೆ ಒದೆಯುವ ಮಾರಮ್ಮ ಮತ್ತು ಬಾಯಿ ತೆಗೆದರೆ ಬೈಗುಳವೇ ಬರುವ ಅವಳೆಪ್ಪ – ಇವರ ನಡುವಿನ ಸಂಬಂಧ ಮಾತ್ರ ಗಾಢವಾದದ್ದು. ಯಾವಾಗಲೂ ಜಗಳವಾಡುತ್ತಲೇ ಇರುವ ಅವರಿಗೆ